2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 51/2023

ಪಿ.ಡಬ್ಲುಃ 18    ಸಿಡಬ್ಲುಃ 47

| | | |
|---|---|---|
| ಸಾಕ್ಷಿಯ ಹೆಸರು | : | ಸಿ. ಎಂ. ತಿಪ್ಪೆಸ್ವಾಮಿ |
| ತಂದೆಯ ಹೆಸರು | : | ಜಿ. ಮಲ್ಲಪ್ಪ |
| ವಯಸ್ಸು | : | 54 ವರ್ಷ |
| ವೃತ್ತಿ | : | ಡಿ ವೈ ಎಸ್ ಪಿ ಡಿ ಆರ್ , ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 23-11-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಡಿಸೆಂಬರ್ 2022 ರಿಂದ ಇಲ್ಲಿಯವರೆಗೆ ಬಳ್ಳಾರಿಯ ಡಿ ಆರ್ ಘಟಕದಲ್ಲಿ ಡಿ ವೈ ಎಸ್ ಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-48 ರವರು ದಿಃ 04-04-2023 ರಂದು ಈ ಪ್ರಕರಣದ ಮೃತನ ವಾಸದ ವಸತಿ ಗೃಹದ ಹಂಚಿಕೆಯ ಬಗ್ಗೆ ಮಾಹಿತಿ ಕೇಳಿದ್ದರು. ಅದರಂತೆ ನಾನು ದಿಃ 11-04-2023 ರಂದು ಮೃತನಿಗೆ ವಸತಿ ಗೃಹ ಅಲಾಟ್ ಮೆಂಟ್ ಆದ ಬಗ್ಗೆ ಮಾಹಿತಿಯನ್ನು ಚಾಸಾ-48 ರವರಿಗೆ ನೀಡಿದ್ದೆ . ಚಾಸಾ-48 ರವರ ಪತ್ರವನ್ನು ನಿಪಿ 51 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು. ನಾನು ನೀಡಿದ್ದ ಮಾಹಿತಿ ಪತ್ರ ಮತ್ತು ಹಂಚಿಕೆ ಆದೇಶವನ್ನು ನಿಪಿ-52 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-52(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

ಮೃತನು ನಿಪಿ-52 ರಲ್ಲಿ ಹೇಳಿರುವ ಮನೆಗೆ ಹೋಗಿದ್ದ ಬಗ್ಗೆ ಪ್ರಮಾಣ ಪತ್ರ ಅಥವಾ ಇತರೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಮೃತನು ಸದರಿ ಮನೆಯನ್ನು ತನ್ನ ತಾಬಾಗೆ ತೆಗೆದುಕೊಂಡ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಮೃತನು ಸದರಿ ಮನೆಯಲ್ಲಿ

ವಾಸ ಮಾಡಿದ ಬಗ್ಗೆ ಆತನಿಂದ ಪಡೆದುಕೊಂಡ ಬಾಡಿಗೆ ಹಣದ ಬಗ್ಗೆ ರಸೀದಿ ಅಥವಾ ಇತರ ದಾಖಲೆಗಳನ್ನು ಹಾಜರುಪಡಿಸಿಲ್ಲ. ಮೃತನು ಸದರಿ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-48 ರವರ ಮಾತನ್ನು ಕೇಳಿಕೊಂಡು ಸುಳ್ಳು ದಾಖಲೆಯನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.